# ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯಗಳು

**ಉಷಾ**
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ ಕನ್ನಡ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳ ಗಂಗೋತ್ರಿ, ಮಂಗಳೂರು.

**Article Link: https://aksharasurya.com/2024/03/usha.php**

**DOI: https://doi.org/10.5281/zenodo.10775072**

## ABSTRACT:

ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡಿರುವ ರಾಮಾಯಣ ಶಕ್ತಿಯುತ ಶ್ರವ್ಯಕಾವ್ಯವಾಗಿ ರಚನೆಯಾಗಿದ್ದು, ಈ ರಾಮಾಯಣದ ಮೂಲಕ ಸಾವಿರಾರು ವರ್ಷಗಳ ಹಿಂದಿನ ಇನ್ನು ಮುಂಬರುವ ಲಕ್ಷಾಂತರ ವರ್ಷಗಳ ಜನರ ಬದುಕಿಗೆ ಪ್ರಜ್ಞಾವಂತ ಪ್ರಗತಿಯನ್ನು, ಪ್ರಜ್ಞೆಯ ಜೀವನವನ್ನು ಕಟ್ಟಿ ಕೊಡುತ್ತದೆ. ವಾಲ್ಮೀಕಿ ವಿರಚಿತ ರಾಮಾಯಣದ ಉತ್ತರ ರಾಮಾಯಣ ಭಾಗವು 14 ವರ್ಷ ವನವಾಸ ಮುಗಿಸಿ ಸೀತೆಯನ್ನು ಅಪಹರಿಸಿದ್ದ ರಾವಣನನ್ನು ಸಂಹರಿಸಿ, ಅಯೋಧ್ಯೆಗೆ ಹಿಂತಿರುಗಿ, ಪಟ್ಟಾಭಿಷೇಕವಾದ ನಂತರದ ಭಾಗವೇ ಉತ್ತರ ರಾಮಾಯಾಣ. ಈ ಭಾಗ ಪ್ರಕ್ಷಿಪ್ತ ಎಂಬ ವಾದ ವಿವಾದಗಳು ನಡೆದರೂ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಹಲವಾರು ಭಾಗಶಃ ಹಾಗೂ ಪೂರ್ಣ ಪ್ರಮಾಣದ ಕೃತಿಗಳು ಕನ್ನಡದಲ್ಲಿ ರಚನೆಯಾದವು. ಕನ್ನಡ ಉತ್ತರ ರಾಮಾಯಣದಲ್ಲಿ ನಾರಾಯಣ, ನರಸ, ತಿರುಮಲೆ ವೈದ್ಯ, ಯೋಗೀಂದ್ರ, ಸೋಸಲೆ ಅಯ್ಯಶಾಸ್ತ್ರಿ ಇವರು ಕೃತಿ ರಚನೆ ಮಾಡಿದರೂ, ಕನ್ನಡ ಸಾಹಿತ್ಯದಲ್ಲಿ ಅಲಕ್ಷ್ಯಕ್ಕೆ ಒಳಪಟ್ಟ ಕವಿಗಳು. ಸಂಸ್ಕೃತ ರಾಮಾಯಣದ ವಸ್ತುವನ್ನು ಅನುಸರಿಸಿ ಕನ್ನಡ ಉತ್ತರ ರಾಮಾಯಣ ಕೃತಿಯನ್ನು ಸಮರ್ಥವಾಗಿ ರಚಿಸಿದರೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿಲ್ಲ. ಸುಮಾರು 15ನೇ ಶತಮಾನದಿಂದ 19ನೇ ಶತಮಾನದವರೆಗೆ ಕನ್ನಡದಲ್ಲಿ ರಚಿತವಾಗಿರುವ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಕಾವ್ಯ ಕೃತಿಗಳಲ್ಲಿ ಲಕ್ಷ್ಮೀಶನನ್ನು ಹೊರತುಪಡಿಸಿದರೆ, ಪೂರ್ಣ ಪ್ರಮಾಣದಲ್ಲಿದ್ದ ಉತ್ತರ ರಾಮಾಯಣ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ ಕವಿಗಳ ಹಾಗೂ ಅವರ ಕಾವ್ಯಗಳನ್ನು ಕನ್ನಡ ಸಾಹಿತ್ಯಕ್ಕೆ ತಿಳಿಸುವ ಉದ್ದೇಶವಾಗಿದೆ.

## KEYWORDS:

ವಾಲ್ಮೀಕಿ ರಾಮಾಯಣ, ಪ್ರಕ್ಷಿಪ್ತ ಭಾಗ, ಉತ್ತರ ರಾಮಾಯಣ, ಕೃತತ್ವ ಶಕ್ತಿ, ಸೀತಾ ಪರಿತ್ಯಾಗ, ಅಶ್ವಮೇಧಯಾಗ, ಸೀತಾ ಶಪಥ, ಆಧ್ಯಾತ್ಮಿಕ.

**ಪೀಠಿಕೆ:**

ವಾಲ್ಮೀಕಿ ವಿರಚಿತ ರಾಮಾಯಣ ಎನ್ನುವುದು ಭಾರತೀಯ ಜನಜೀವನದಲ್ಲಿ ಬೆರೆತು ಹೋದ ಸಂಸ್ಕೃತಿ ದರ್ಶನವಾಗಿದೆ. ಭಾರತೀಯ ಧರ್ಮ, ಸಂಸ್ಕೃತಿ, ನಾಗ ರೀಕತೆಗಳ ಸಮಗ್ರತೆ ನಿಂತಿರುವುದು ರಾಮಾಯಣದ ಆಧಾರದಲ್ಲಿ. ರಾಮಾಯಣದಲ್ಲಿ ಕಾವ್ಯ, ಕಥೆ, ಧರ್ಮ, ಚರಿತ್ರೆ, ಸಂಸ್ಕೃತಿ, ನೀತಿ, ಪಾತ್ರ ವರ್ಣನೆ, ಲೋಕವ್ಯವಹಾರ, ಜೀವನ ವಿಧಾನ ಮುಂತಾದವುಗಳನ್ನು ಒಳಗೊಂಡ ಮಹೋನ್ನತವಾದ ಕಾವ್ಯ. ಭಾರತೀಯ ಜನಜೀವನದಲ್ಲಿ ಮೌಲ್ಯಧಾರಿತ ಮಹಾಕಾವ್ಯವಾದ ರಾಮಾಯಣ ಅತ್ಯಂತ ಮಹತ್ವದ ಸ್ಥಾನ ಪಡೆದಿದ್ದು, ಮಾತ್ರವಲ್ಲ ಇಂದಿಗೂ ಹೊಸ ಹೊಸ ಮಾರ್ಪಾಡುಗಳ ಮೂಲಕ ಅಧ್ಯಯನ ಯೋಗ್ಯವೆನಿಸಿದೆ. ಈ ಮಹಾಕಾವ್ಯದ ಸಾರವತ್ತಾದ ಜೀವನವೇ ಇಂದಿನ ಮನುಕುಲದ ಬದುಕಿಗೆ ಮಹೋನ್ನತ ಪ್ರೇರಣೆಯಾಗಿದೆ. ಜಗತ್ತು ಬೆಳೆದಂತೆ ಕಾಲಚಕ್ರ ಉರುಳಿದಂತೆ ತಲೆಮಾರುಗಳು ಕಳೆದಂತೆ ರಾಮಾಯಣಗಳ ಟಿಸಿಲುಗಳು ಬೆಳೆಯುತ್ತಾ ಹೋದವು. ಮಹಾಕಾವ್ಯ ರಾಮಾಯಣ ಭಿನ್ನ ಭಿನ್ನ ಸ್ವರೂಪಗಳಲ್ಲಿ ಬೇರೆ ಬೇರೆ ಸಂಸ್ಕೃತಿಗೆ ತಕ್ಕಂತೆ ನೂರಾರು ರಾಮಾಯಣಗಳು ಬೇರೆ ಬೇರೆ ಭಾಷೆಗಳಲ್ಲಿ ರಚನೆಯಾಗುತ್ತಾ ಬಂದವು. ಹೀಗೆ ರಚನೆಯಾದ ರಾಮಾಯಣಗಳಲ್ಲಿ ಪಾತ್ರ ವೈಶಿಷ್ಟ್ಯತೆಯ ಭಿನ್ನತೆಗಳು ಕಂಡುಬಂದವು. ರಾಮಾಯಣಗಳು ರಚನೆಯಾದಂತೆ ರಾಮಾಯಣಗಳ ಪಾತ್ರಗಳಲ್ಲಿ ನಾಯಕತ್ವದ ಬದಲಾವಣೆಗಳು ನಡೆದವು. ಈ ನಾಯಕತ್ವದ ಬದಲಾವಣೆಗಳಿಂದ ರಾಮಾಯಣ ಕಾವ್ಯಗಳ ಆಳ–ಅಗಲಗಳು ವಿಸ್ತರಿಸುತ್ತಾ ಸಾಗಿವೆ. ಇದರಿಂದ ಕೆಲವು ಪಾತ್ರಗಳು ಪ್ರಧಾನವಾಗಿ, ಕೆಲವು ಪಾತ್ರಗಳು ಗೌಣವಾಗಿಯೂ ರಚನೆಯಾಗಿರುವುದು ರಾಮಾಯಣಗಳ ಅಧ್ಯಯನ ವಿಶೇಷವಾಗಿದೆ. ರಾಮಾಯಣ ಅಧ್ಯಯನ ಎಲ್ಲಾ ಕಾಲಕ್ಕೂ ಪ್ರಸ್ತುತಾರ್ಹ. ಯಾಕೆಂದರೆ ಭೂಮಿಯಲ್ಲಿನ ಸೃಷ್ಟಿ, ಸ್ಥಿತಿ, ಲಯಗಳ ಹಿನ್ನೆಲೆಯಲ್ಲಿ ಬದುಕುವ ನಮಗೆ ಜೀವನ ದರ್ಶನವನ್ನು ಅಧ್ಯಾತ್ಮಿಕ ಮಾರ್ಗದರ್ಶನವನ್ನು ತೋರಿಸುತ್ತದೆ.

ರಾಮಾಯಣದ ನಿರೂಪಣೆ, ಶಕ್ತಿಯುತ ಶ್ರವ್ಯವಾಗಿ ರಚನೆಯಾಗಿದ್ದು, ಈ ರಾಮಾಯಣದ ಮೂಲಕ ಸಾವಿರಾರು ವರ್ಷಗಳ ಹಿಂದಿನ ಇನ್ನು ಮುಂಬರುವ ಲಕ್ಷಾಂತರ ವರ್ಷಗಳ ಜನರ ಬದುಕಿಗೆ ಪ್ರಜ್ಞಾವಂತ ಪ್ರಗತಿಯನ್ನು ಪ್ರಜ್ಞೆಯ ಜೀವನವನ್ನು ಕಟ್ಟಿಕೊಡುವುದು ರಾಮಾಯಣದ ಮಹತ್ವವನ್ನು ಎತ್ತಿ ಸಾರುತ್ತದೆ.

**ಉತ್ತರ ರಾಮಾಯಣ ಆಧಾರಿತ ಕನ್ನಡ ಕಾವ್ಯಗಳು:**

ವಾಲ್ಮೀಕಿ ವಿರಚಿತ ರಾಮಾಯಣದಲ್ಲಿ 14 ವರ್ಷ ವನವಾಸ ಮುಗಿಸಿ,

ಸೀತೆಯನ್ನು ಅಪಹರಿಸಿದ ರಾವಣನನ್ನು ಸಂಹರಿಸಿ, ಅಯೋಧ್ಯೆಗೆ ಹಿಂತಿರುಗಿ ಪಟ್ಟಾಭಿಷೇಕಾವಾದ ನಂತರದ ಭಾಗ, ಈ 7 ಕಾಂಡಗಳಲ್ಲಿ ಕೊನೆಯ ಕಾಂಡವೇ ಉತ್ತರ ರಾಮಾಯಣ. ಇದನ್ನು ನಂತರ ಸೇರಿಸಲ್ಪಟ್ಟ ಭಾಗವೆಂದು ವಾದ ವಿವಾದಗಳಿವೆ.

ಉತ್ತರಕಾಂಡ ಪ್ರಕ್ಷಿಪ್ತ ಎಂಬುದು ಅನೇಕ ವಿದ್ವಾಂಸರ ಅಭಿಮತ.[1] ವಾದ ವಿವಾದಗಳು ನಡೆದರೂ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಹಲವಾರು ಭಾಗಶಃ ಹಾಗೂ ಪೂರ್ಣ ಪ್ರಮಾಣದ ಕೃತಿಗಳು ಕನ್ನಡದಲ್ಲಿ ರಚನೆಯಾದವು. ಉ.ಕಾಂಡವನ್ನು ಯಾರೇ ಬರೆದಿರಲಿ, ವಾಲ್ಮೀಕಿ ಋಷಿಯ ಪರಂಪರೆಯವರೇ ಬರೆದಿರಲಿ ಅಥವಾ ಬೇರೆ ಯಾರೋ ಬರೆದು ವಾಲ್ಮೀಕಿ ಹೆಸರಿನಲ್ಲಿ ಸೇ ರಿಸಿರಲಿ, ಆ ಕಾಂಡವನ್ನು ಒಳಗೊಂಡಂತೆಯೇ ರಾಮಾಯಣ ಸಂಪೂರ್ಣ ರಾಮಾಯಣವಾಗಲು ಸಾಧ್ಯ, ಇಲ್ಲವಾದರೆ ಅಪೂರ್ಣ.[2] ರಾಮಾಯಣ ಮಹಾಕಾವ್ಯ ಮಹತ್ವದ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿಲು ಉಳಿದ ಏಳು ಕಾಂಡಗಳನ್ನು ಬಳಸಿಕೊಳ್ಳಬೇಕು. ಆಗ ರಾಮಾಯಣ ಸಂಪೂರ್ಣವಾಗುತ್ತದೆ. ಹಾಗೆಯೇ ರಾಮನ ಚರಿತ್ರೆ ಪೂರ್ಣಗೊಳ್ಳಬೇಕಾದರೆ ರಾಮಾಯಣ ಕೊನೆಗೊಳ್ಳುತ್ತದೆ. ಇದಕ್ಕೆ ರಾಮನ ಪತ್ನಿಯಾದ ಸೀತೆಯ ಪಾತ್ರ ಸಹಕಾರವೂ ಬೇಕು. ಹಾಗಾದರೆ ಮಾತ್ರ ರಾಮಾಯಣ ಚರಿತ್ರೆ ಪೂರ್ಣಗೊಳ್ಳುತ್ತದೆ.[3]

ಕನ್ನಡದ ಉತ್ತರ ರಾಮಾಯಣ ಕಥಾ ಸ್ವರೂಪಗಳು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಕನ್ನಡದಲ್ಲಿ ರಚನೆಯಾದ ಕನ್ನಡದ ಉತ್ತರ ರಾಮಾಯಣಗಳು ಕನ್ನಡದ ಜ್ಞಾನ ವಿಸ್ತಾರವನ್ನು ಹೆಚ್ಚಿಸಿದಲ್ಲದೆ ಒಂದು ಮೈಲಿಗಲ್ಲನ್ನು ಸಾಧಿಸಿದೆ. ಯಾಕೆಂದರೆ ರಾಮಾಯಣದ ಉತ್ತರ ಭಾಗವನ್ನು ಉತ್ತರ ರಾಮಾಯಣದ ಭಾಗವನ್ನಾಗಿಸಿ ಕೃತಿಗಳು ಮೂಡಿಬಂದಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಸ್ಮಿತೆಯ ಘಟ್ಟ.

**ಕನ್ನಡದಲ್ಲಿ ರಚನೆಯಾದ ಉತ್ತರ ರಾಮಾಯಣ ಕೃತಿಗಳೆಂದರೆ**

| | | |
|---|---|---|
| ನಾರಾಯಣ ಕವಿ | – | ಉತ್ತರ ರಾಮಕಥೆ |
| ನರಸ ಕವಿ | – | ಉತ್ತರ ರಾಮಕಥೆ |
| ತಿರುಮಲೆ ವೈದ್ಯ | – | ಉತ್ತರ ರಾಮಾಯಣಂ |
| ಯೋಗಿಂದ್ರ ಕವಿ | – | ಉತ್ತರ ರಾಮಾಯಣಂ |
| ಸೋಸಲೆ ಅಯ್ಯಶಾಸ್ತ್ರೀ | – | ಶೇಷರಾಮಾಯಣಂ |
| ಮುದ್ದಣ | – | ರಾಮಾಶ್ವಮೇಧ |

ಇವು ನಿರ್ದಿಷ್ಟ ಉತ್ತರ ರಾಮಾಯಣದ ಕನ್ನಡ ಕೃತಿಗಳು. ಈ ಉತ್ತರ ರಾಮಾಯಣ ಕಾವ್ಯಗಳು ಹೊಸತನವನ್ನು ಸೃಷ್ಟಿಸಿದರೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮತ್ತು ಓದುವಿಕೆಯ ವಿಸ್ತಾರ ಗತಿಯ ಲೋಕರೂಢಿಯಲ್ಲಿ ಚರ್ಚೆಗೆ ಒಳಗಾಗದೆ ಇರುವ ಭಾಗವಾಗಿವೆ. ಕನ್ನಡ ಉತ್ತರ ರಾಮಾಯಣಗಳಲ್ಲಿ ನಿರೂಪಿತವಾದ ಪಾತ್ರಸೃಷ್ಟಿ ಮತ್ತು ಪಾತ್ರ ಸನ್ನಿವೇಶಗಳು ಹೊಸದಾದ ಕೃತತ್ವ ಶಕ್ತಿಯನ್ನು ಹೊಂದಿದ್ದರೂ ಕಥೆಯ ಹೂರಣ ಹಿಂದಣದ್ದಾಗಿಯೇ ಮೂಡಿದೆ. ಈ 5 ಕೃತಿಗಳಿಗೆ ಮೂಲ ಈ ಕೆಳಗಿನಂತಿವೆ.

ವಾಲ್ಮೀಕಿ ರಾಮಾಯಣ ↓ ನಾರಾಯಣ ↓ ನರಸ ↓ ತಿರುಮಲೆ ↓ ಯೋಗೀಂದ್ರ

ಪದ್ಮಪುರಾಣ ↓ ಸೋಸಲೆ ಅಯ್ಯಶಾಸ್ತ್ರಿ

ಸರಿಸುಮಾರು 16000 ಕಾಲಮಾನದಂತಹ ಬ್ರಾಹ್ಮಣ ಕವಿ ನಾರಾಯಣ ಈ ನಾರಾಯಣನು 'ಉತ್ತರರಾಮ ಕಥೆ' ಎಂಬ ಕಾವ್ಯವನ್ನು ರಚಿಸಿದ್ದಾನೆ. ಈ ಹೆಸರಿದ್ದರೂ 'ಉತ್ತರಕಾಂಡ ರಾಮಾಯಣ' ಎಂದೇ ಇದು ಪ್ರಚಾರದಲ್ಲಿದೆ. ಮಂಗೇಶರಾಯರು ಸಹ ತಮ್ಮ ಬರಹದಲ್ಲಿಯೂ ನಾರಾಯಣನ 'ಉತ್ತರಕಾಂಡ ರಾಮಾಯಣ' ಎಂಬ ಹೆಸರನ್ನೇ ಬಳಸಿದ್ದಾರೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಇದು ಒಟ್ಟು 49 ಸಂಧಿಗಳ 2138 ಪದ್ಯಗಳನ್ನು ಒಳಗೊಂಡಿದೆ. ನಾರಾಯಣನು ಶ್ರೀರಾಮನ ಪಟ್ಟಾಭಿಷೇಕಾನಂತರದ ಕಥೆಯನ್ನೇ ಪ್ರಧಾನವಾಗಿ ಹೇಳಿದ್ದಾನೆ. ಪೂರ್ವವಿಭಾಗ ಮತ್ತು ಉತ್ತರವಿಭಾಗ ಎಂದು ಎರಡು ಭಾಗಗಾಳಾಗಿ ಈ ಕೃತಿಯು ಮುದ್ರಣಗೊಂಡಿದೆ. ಉತ್ತರ ರಾಮಾಯಣ ಕೃತಿಗಳಲ್ಲಿ ಈ ಕೃತಿ ಹಿರಿಯ ಸ್ಥಾನ ಪಡೆದರೂ ವಾಲ್ಮೀಕಿಯ ರಾಮಾಯಣದ ಉತ್ತರಕಾಂಡವನ್ನು ಅನುಸರಿಸಿದೆ. ಅಲ್ಲದೇ ಕೊನೆಯ ಘಟ್ಟ ಪೌರಾಣಿಕ ಪರಂಪರೆಯ ಕಡೆಗೆ ಸಾಗಿರುವುದನ್ನು ಕಾಣಬಹುದು.

ಕನ್ನಡದಲ್ಲಿ 'ಉತ್ತರರಾಮಕಥೆ' ಕಾವ್ಯವನ್ನು ಬರೆದ ಮತ್ತೊಬ್ಬ ಬ್ರಾಹ್ಮಣ

ನರಸಕವಿಯಾಗಿದ್ದಾನೆ. ಕರ್ಣಾಟಕ ಕವಿಚರಿತೆಕಾರರು ಈತನ ಹೆಸರನ್ನು ನರಸಪ್ಪ ಎಂದು ಉಲ್ಲೇಖಿಸಿದ್ದಾರೆ. ಇವನ ಕಾವ್ಯದಲ್ಲಿ ಕವಿ ನರಸಾ ಎಂದೇ ಉಕ್ತವಾಗಿದೆ. ಕವಿಚರಿತೆಯಲ್ಲಿ ಇವನ ಕಾಲ 1612 ಎಂದು ಹೇಳಲಾಗಿದೆ. ಈ ನರಸನ ಕಾವ್ಯವೇ ಇದುವರೆಗೂ ಕನ್ನಡದಲ್ಲಿ ದೊರಕಿರುವ ಉತ್ತರ ರಾಮಾಯಣಗಳಲ್ಲಿ ದೊಡ್ಡದಾಗಿದೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿದೆ. ಇಲ್ಲಿ ಒಟ್ಟು 56 ಸಂಧಿಗಳು. 2675 ಪದ್ಯಗಳಿವೆ. ಇವುಗಳಲ್ಲಿ 85 ಪದ್ಯಗಳನ್ನುಳ್ಳ 19ನೇ ಸಂಧಿಯೇ ದೊಡ್ಡದಾಗಿದೆ. 12ನೇ ಸಂಧಿ ಚಿಕ್ಕದಾಗಿದ್ದು, 19 ಪದ್ಯಗಳನ್ನು ಹೊಂದಿದೆ. ಉತ್ತರ ರಾಮಕಥೆಯು ಹೆಚ್ಚು ವ್ಯಾಪ್ತಿಯನ್ನು ಪಡೆದಿದ್ದು, ಕಾವ್ಯ ಅಸ್ವಾದನೆ ಕಡಿಮೆಯಾದರೂ ವರ್ಣನೆಗಳಿಂದ ಕೂಡಿದ ನಾಟಕೀಯ ಶೈಲಿಯ ಕೃತಿಯಾಗಿದೆ. ಕಾವ್ಯ ಹಿರಿದಾದರೂ ಸನ್ನಿವೇಶಗಳು ತೀರಾ ಮೊಟಕಾಗಿದ್ದು, ನಿರೂಪಣೆಯಲ್ಲಿ ನಿರಂತರತೆ ಇರುವುದು ವಿಶೇಷವಾಗಿದೆ.

ಕವಿಚರಿತಕಾರರು ಊಹಿಸಿದಂತೆ ಯೋಗೀಂದ್ರನು 1650 ರಲ್ಲಿದ್ದಂತಹ ಒಬ್ಬ ಬ್ರಾಹ್ಮಣ ಕವಿ. ಈ ಕವಿಯು 48 ಸಂಧಿಗಳಲ್ಲಿ 2463 ಷಟ್ಪದಿಗಳಲ್ಲಿ ತನ್ನ ಕಾವ್ಯ 'ಉತ್ತರ ರಾಮಾಯಣ'ವನ್ನು ರಚಿಸಿದ್ದಾರೆ. ಇದರಲ್ಲಿ ರಗಳೆ, ವಾರ್ಧಕ ಷಟ್ಪದಿಗಳು ಇವೆ. ಕವಿಗೆ ಸೂಕ್ತವಾದ ವೈವಿಧ್ಯಪೂರ್ಣವಾದ ಛಂದಸ್ಸನ್ನು ಒಳಗೊಂಡಿದೆ. ಯೋಗೀಂದ್ರನ ಉತ್ತರರಾಮಾಯಣ ಕಾವ್ಯವನ್ನು ಪೂರ್ವಾರ್ಧ ಮತ್ತು ಉತ್ತರಾರ್ಧ ಎಂದು ವಿಭಾಗಿಸಬಹುದಾಗಿದೆ. ಯೋಗೀಂದ್ರನು ತನ್ನ ಕಾವ್ಯಕ್ಕೆ ವಾಲ್ಮೀಕಿ ರಾಮಾಯಣವೇ ಆಕರವಾಗಿದೆ ಎಂಬುದನ್ನು 47ನೇ ಸಂಧಿಯ 66ನೇ ಪದ್ಯದಲ್ಲಿ ಸ್ವತಃ ಹೇಳಿದ್ದಾನೆ. ಈ ಕೃತಿಯಲ್ಲಿ ಸನ್ನಿವೇಶ, ಪಾತ್ರಚಿತ್ರಣ, ವರ್ಣನೆ ಇದ್ದರೂ ಭಾಷೆಯ ಶೈಲಿ ಸಾಧಾರಣವಾಗಿದೆ. ಸೀತಾ ಪ್ರಲಾಪ ಹೆಚ್ಚು ವಿವರ ಹೊಂದಿದ ಕಾವ್ಯವಾಗಿದ್ದು, ವರ್ಣನೆಗಳಿಗೆ ಸ್ಥಾನ ಕೊಡಲಾಗಿದ್ದು, ಮಾತ್ರವಲ್ಲ ಪ್ರಕೃತಿಯ ವರ್ಣನೆಯ ಸ್ಥಾನವು ಹೆಚ್ಚಾಗಿದೆ.

ತಿರುಮಲೆ ವೈದ್ಯನೂ ಬ್ರಾಹ್ಮಣ ಕವಿ. ಇವನ ಕಾಲ ಸು.1650. ಈತನು ಕನ್ನಡದಲ್ಲಿ 'ಉತ್ತರ ರಾಮಾಯಣಂ' ಎಂಬ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ ರಾಮಾಯಣದ ಉತ್ತರಕಾಂಡದ ಕಥನವನ್ನು ಕನ್ನಡಸಿದ್ದಾನೆ. ತೊರವೆ ರಾಮಾಯಣವನ್ನು ರಚಿಸಿದ ಕುಮಾರ ವಾಲ್ಮೀಕಿಯು ಕನ್ನಡಿಸದೆ ಬಿಟ್ಟ ಕಾಂಡವನ್ನು ರಚಿಸಿದ್ದಾನೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿದೆ. ಇದರಲ್ಲಿ 20 ಸಂಧಿಗಳಿವೆ. 1021 ಪದ್ಯಗಳಿವೆ. 8ನೇ ಸಂಧಿ ದೊಡ್ಡದಾಗಿದ್ದು, 98 ಪದ್ಯಗಳನ್ನು ಹೊಂದಿದೆ. 1ನೇ ಸಂಧಿ ಚಿಕ್ಕದಾಗಿದ್ದು, 14 ಪದ್ಯಗಳು ಮಾತ್ರ ಇವೆ. ಈ ಕೃತಿಯಲ್ಲಿ ಉಪಖ್ಯಾನಗಳಿಲ್ಲದ ಹಿತ, ಮಿತ, ಮೃದು ವಚನವನ್ನು ಒಳಗೊಂಡಿದ್ದು, ಅನಾವಶ್ಯಕ ವಿವರಗಳಿರದೆ ಮೂಲ ಕೃತಿಗೆ ಭಂಗಬಾರದಂತೆ ರಚಿತವಾಗಿದೆ.

ಸನ್ನಿವೇಶ ರಚನೆ, ಪಾತ್ರ ನಿರ್ಮಾಣ, ವರ್ಣನೆಗಳು ಕಡಿಮೆಯಾದರೂ ಭಾಷಾ ಶೈಲಿ ಆಕರ್ಷಣೆಯನ್ನು ಹೊಂದಿದೆ. ಪೂರ್ವ ಕವಿಗಳ ಪ್ರಭಾವಕ್ಕೆ ಒಳಗಾಗಿರುವ ಈ ಕವಿ ಕಾವ್ಯದ ಸೊಗಸನ್ನು ಇಮ್ಮಡಿಗೊಳಿಸಿದ್ದಾನೆ.

ಕನ್ನಡ ಸಾಹಿತ್ಯವು ಆಧುನಿಕ ಯುಗವನ್ನು ಪ್ರವೇಶಮಾಡುತ್ತಿದ್ದ ಸಂಧಿಕಾಲದಲ್ಲಿ ಸೋಸಲೆ ಅಯ್ಯಶಾಸ್ತ್ರಿ (1854–1934) ಕಾವ್ಯ ಮತ್ತು ನಾಟಕಗಳನ್ನು ರಚಿಸಿದವನು. ಈತನು 1901ರಲ್ಲಿ ವಾರ್ಧಕ ಷಟ್ಪದಿಯಲ್ಲಿ 'ಶೇಷರಾಮಯಣಂ' ಎಂಬ ಕಾವ್ಯವನ್ನು ರಚಿಸಿದನು. ಇದರ ಉದ್ದೇಶವು ಉತ್ತರರಾಮಾಯಣದ ರಾಮಾಶ್ವಮೇಧದ ಕಥಾಭಾಗವನ್ನು ಪದ್ಯಪುರಾಣೋಕ್ತ ರೀತಿಯಿಂದ ಸುಲಭವಾಗಿ ತಿಳಿಯುವಂತೆ ನಿರೂಪಣೆ ಮಾಡುವುದಾಗಿತ್ತು. ಈ 'ಶೇಷರಾಮಾಯಣಂ' ಒಟ್ಟು 34 ಸಂಧಿಗಳ 1340 ಪದ್ಯಗಳನ್ನು ಒಳಗೊಂಡಿದೆ. ಇದರ 8ನೇ ಸಂಧಿ ದೊಡ್ಡದಾಗಿದ್ದು, 85 ಪದ್ಯಗಳಲ್ಲಿವೆ. ಮೊದಲ ಸಂಧಿ ಚಿಕ್ಕದಾಗಿದ್ದು 19 ಪದ್ಯಗಳಿವೆ. ಪೌರಾಣಿಕ ವಸ್ತುವನ್ನು ಕಾವ್ಯದಲ್ಲಿ ಮಾರ್ಪಾಡಿಸುವಲ್ಲಿ ಕಾವ್ಯ ಲಕ್ಷಣಗಳನ್ನು ಒಗ್ಗೂಡಿಸಿಕೊಂಡು ಬಳಸುವಲ್ಲಿ ಕವಿಯ ಶ್ರಮ ಅಪಾರವಾಗಿದ್ದು, ಪಾಂಡಿತ್ಯ ಪ್ರೌಢಿಮೆಯನ್ನು ಪ್ರಕಟಿಸುವಲ್ಲಿ ಸಫಲವಾಗಿದೆ. ಪಾಂಡಿತ್ಯ ಪೂರ್ಣವಾದ ಶಿಷ್ಟಭಾಷೆಯಲ್ಲಿದ್ದ ಸಂಸ್ಕೃತ ಭೂಯಿಷ್ಟ ಮತ್ತು ಸಂಸ್ಕೃತ ಮಿಶ್ರಿತ ನಡುಗನ್ನಡ ಭಾಷೆಯಿಂದ ಸನ್ನಿವೇಶ ಪಾತ್ರವರ್ಣನೆಯಿಂದ ಕೂಡಿದೆ. ಮೂಲಕಥೆಗೆ ಲೋಪವಿಲ್ಲದೇ ಪುರಾಣದ ಸಂಗತಿಗಳನ್ನು ಕ್ರಮಬದ್ಧವಾದ ವ್ಯವಸ್ಥಿತವಾದ ರೀತಿಯಲ್ಲಿ ಜೋಡಿಸಲಾದ ಈ ಕೃತಿಗೆ ಪದ್ಮಪುರಾಣವೇ ಆಕರವಾಗಿದೆ.

**ಉಪ ಸಂಹಾರ:**

ರಾಮಾಯಣ ಕಥೆ ಪೂರ್ಣಗೊಳ್ಳಲು ಕಥೆಯ ಪಾತ್ರಗಳು ಕೊನೆಯ ಹಂತಕ್ಕೆ ಸಾಗಬೇಕಾಗಿರುವುದು ಉತ್ತರ ರಾಮಾಯಣದಲ್ಲಿ. ಆದ್ದರಿಂದ ಉತ್ತರ ರಾಮಾಯಣ ಮುಖ್ಯ ಭಾಗವಾಗಿದೆ.

ರಾಮಾಯಣ ಪೂರ್ಣಗೊಳ್ಳಲು ಉತ್ತರಕಾಂಡ ಬೇಕೇ ಬೇಕು. ಸಾಂಸಾರಿಕ ಜೀವನ, ಸೀತಾಪವಾದ, ಸೀತಾ ಪರಿತ್ಯಾಗ, ಲವಕುಶರ ಜನನ, ಅಶ್ವಮೇಧ ಯಾಗದ ಆಚರಣೆ, ಸೀತಾ ಶಪಥ ಇದ್ದರೆ ಮಾತ್ರ ರಾಮಾಯಣ ಸಂಪೂರ್ಣಗೊಳ್ಳುವುದು. ಸಂಪೂರ್ಣಗೊಳ್ಳಬೇಕಾದರೆ, ಕಥೆ ಕೊನೆಗೊಳ್ಳಬೇಕಾದರೆ, ಪಾತ್ರಗಳ ಕೊನೆಯೂ ಆಗಬೇಕಾಗಿರುವುದು ಉತ್ತರಾಮಾಯಣದಲ್ಲಿ ಆದ್ದರಿಂದ ರಾಮಾಯಣದ ಕೊನೆಯ ಭಾಗ ಉತ್ತರ ರಾಮಾಯಣವನ್ನು ಹೊಂದಿದ್ದರೆ ಮಾತ್ರ ಪೂರ್ಣ ಕೃತಿ ಎಂದು ಹೇಳುವುದರಲ್ಲಿ ಸಂದೇಹವಿಲ್ಲ.

## ಅಡಿಟಿಪ್ಪಣಿಗಳು:

1. ಮಾಸ್ತಿ. ಆದಿಕವಿ ವಾಲ್ಮೀಕಿ. ಜೀವನ ಕಾರ್ಯಾಲಯ. ಬೆಂಗಳೂರು. ಪು.ಸಂ. 16
2. ಸರಸ್ವತಿ ಟಿ. ಎಂ. (2000). ಕನ್ನಡದಲ್ಲಿ ಉತ್ತರ ರಾಮ ಕಥಾ ಕಾವ್ಯಗಳು. ರೂಪ ಪ್ರಕಾಶನ. ಮೈಸೂರು. ಪು.ಸಂ. 6
3. ಪುಲಸ್ಕರ್ ಎಮ್. ಡಿ. ಯುಗಯಾತ್ರಿ (ಲೇ). ಭಾರತೀಯ ಸಂಸ್ಕೃತಿ. ಪ್ರಸರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 12

## ಪರಾಮರ್ಶನ ಗ್ರಂಥಗಳು:

1. ಕೃಷ್ಣಮೂರ್ತಿ ಕೆ. (1994). ಕನ್ನಡ ಉತ್ತರರಾಮ ಚರಿತೆ. ಕಾವ್ಯಾಲಯ. ಮೈಸೂರು.
2. ಲಕ್ಷ್ಮಣ ವಿರುಪಾಕ್ಷ ಜೋಶಿ. (1989). ಉತ್ತರ ರಾಮಾಯಣ. ಪ್ರತಿಭಾ ಗ್ರಂಥಮಾಲೆ. ಧಾರವಾಡ.
3. ಸರಸ್ವತಿ ಟಿ. ಎಂ. (2000). ಕನ್ನಡದಲ್ಲಿ ಉತ್ತರ ರಾಮ ಕಥಾ ಕಾವ್ಯಗಳು. ರೂಪ ಪ್ರಕಾಶನ. ಮೈಸೂರು.
4. ಮಾಸ್ತಿ ವೆಂಕಟೇಶ್ ಅಯ್ಯಂಗಾರ್. (1955). ಆದಿಕವಿ ವಾಲ್ಮೀಕಿ. ಜೀವನ ಕಾರ್ಯಾಲಯ. ಬೆಂಗಳೂರು.